

ಕುಳಿತು ಅವನ್ನು ತಿನ್ನುತ್ತಿದ್ದವೇ? ಹುಲಿಮರಿಗಳು ಹಾಲಿಗಾಗಿ ಪರಿತಪಿಸಲು ಅವುಗಳ ಹಸಿದ ಹೊಟ್ಟೆಯೊಂದೇ ಕಾರಣವೇ? ಚೇಳುಗಳ ವಿಷದ ಕೊಂಡಿಯನ್ನು ತುಂಡರಿಸಿ ಅವು ಕುಟುಕಲಾಗದಂತೆ ಮಾಡಿರುವುದಕ್ಕೇ ಅಲ್ಲವೇ ಅವನ್ನು ಮೈಮೇಲೆ ಬಿಟ್ಟುಕೊಳ್ಳಲು ಸಾಧ್ಯವಾಗುವುದು?...' ಆತ ಹೇಳುತ್ತಲೇ ಹೋದ.

'ಆ ಹುಲಿಗಳಿಗೆಲ್ಲ ಮಂಪರು ಬರಿಸುವ ಡ್ರಗ್ಸ್ ನೀಡಲಾಗಿದೆ. ಹೀಗಾಗಿಯೇ ಅವುಗಳೊಂದಿಗೆ ಪ್ರವಾಸಿಗರಿಗೆ ಈ ರೀತಿಯ ಒಡನಾಟ ಸಾಧ್ಯ. ಹುಲಿಯ ಕಣ್ಣುಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಅನುಭವಿಗಳಿಗೆ ಆ ವ್ಯತ್ಯಾಸ ಕಾಣುತ್ತದೆ. ಈ ಕುರಿತು ಸಾಕಷ್ಟು ಅಧ್ಯಯನ ನಡೆಸಿಬಿಟ್ಟಿರುವೆ ನಾನು.'

* * *

ಇಲ್ಲೇನೋ ಸರಿಯಿಲ್ಲ ಎಂದು ನನಗೆ ಆರಂಭದಿಂದಲೇ ಅನ್ನಿಸಿತ್ತಾದರೂ ವಾರೆಂಟ್ ಸಾಟ್‌ನ ವಿವರದಿಂದ ಎಲ್ಲವೂ ಮತ್ತಷ್ಟು ಸ್ಪಷ್ಟವಾಗತೊಡಗಿತು.

'ಈಗ ಹೇಳು. ಹುಲಿಯೊಂದನ್ನು ಬಂದೂಕಿನಿಂದ ಶೂಟ್ ಮಾಡುವುದು ಒಳಿತೋ ಅಥವಾ ಕ್ಯಾಮರಾದಿಂದ ಶೂಟ್ ಮಾಡುವುದು ಒಳಿತೋ?' ಎನ್ನುವ ಪ್ರಶ್ನೆ ತೂರಿಬಿಟ್ಟ ಆತ.

ಈ ಒಂದು ಅನಿರೀಕ್ಷಿತ ಪ್ರಶ್ನೆಗೆ ಗೊಂದಲಗೊಳ್ಳುತ್ತಲೇ ನನ್ನ ಮನಸ್ಸು ಇನ್ನೊಂದೆಡೆ ಏನೇನೋ ಆಲೋಚಿಸತೊಡಗಿತು. ನ್ಯಾಷನಲ್ ಜಿಯೋಗ್ರಾಫಿಕ್ ಸಂಸ್ಥೆಯವರು ಪ್ರತಿ ವರ್ಷ ಆಯೋಜಿಸುವ ವನ್ಯಜೀವಿ ಫೋಟೊಗ್ರಫಿ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದ್ದ ಏರೋಪ್ಲೇನ್ ಚಿಟ್ಟೆಯ ಫೋಟೊ ಕಣ್ಮುಂದೆ ಬಂತು. ಹುಲ್ಲು ಕಡ್ಡಿಯೊಂದರ ಮೇಲೆ ಕುಳಿತಿರುವ ಚಿಟ್ಟೆ, ಧಾರಾಕಾರ ಮಳೆಯ ರಭಸಕ್ಕೆ ಹಾರಲಾರದೇ ಕಷ್ಟಪಡುತ್ತಿರುವ ಆ ಪಟ ಬಹಳ ಪ್ರಚಲಿತವಾಗಿತ್ತು. ನಂತರ ಆ ಫೋಟೊ ಕೃತಕವಾಗಿ ಸೃಷ್ಟಿಯಾದದ್ದು ಎಂಬುದನ್ನು ಪತ್ತೆ ಹಚ್ಚಿದ ನ್ಯಾಷನಲ್ ಜಿಯೋಗ್ರಫಿಯವರು ಪ್ರಶಸ್ತಿಯನ್ನು ಹಿಂಪಡೆದುದೂ ಸುದ್ದಿಯಾಗಿತ್ತು. ಚಿಟ್ಟೆಯ ಪಾದಗಳನ್ನು ಹುಲ್ಲು ಕಡ್ಡಿಗೆ ಗ್ಲೂ ಬಳಸಿ ಅಂಟಿಸಿ, ಅದರ ಮೇಲೆ ನೀರನ್ನು ಸ್ಪ್ರೇಯರ್‌ನಿಂದ ಸಿಂಪಡಿಸಿ, ಅದು ರೆಕ್ಕೆ ಬಡಿಯುತ್ತ ಹಾರಲಾಗದೇ ಚಡಪಡಿಸುತ್ತಿರುವಾಗ ಕ್ಲಿಕ್ಕಿಸಿದ ಫೋಟೊ ಅದಾಗಿತ್ತು! ಫೋಟೊಕ್ಕಾಗಿ ಏನೆಲ್ಲಾ